


2007ರಲ್ಲಿ ಚೊಚ್ಚಿಲ ಟಿ20 ಕ್ರಿಕೆಟ್ ವಿಶ್ವಕಪ್ ಗೆದ್ದ ಸಂಭ್ರಮದಲ್ಲಿ ಧೋನಿ ಪಡೆ




ಫಾರ್ಮ್‌ಗೆ ಬರುವ ನಿರೀಕ್ಷೆಯಲ್ಲಿ ಭಾರತ ತಂಡದ ಉಪನಾಯಕ ಹಾರ್ದಿಕ್ ಪಾಂಡ್ಯ

ದ್ವಿಶತಕ ಬಾರಿಸಿದಾಗ ಜೈಸ್ವಾಲ್ ಬ್ಯಾಟಿಂಗ್ ಸಾಮರ್ಥ್ಯ ಎಲ್ಲರ ಕಣ್ಣು ಕೋರೈಸುವಂತೆ ಮಾಡಿತು. ವಿನೋದ್ ಕಾಂಬ್ಳಿ ಮತ್ತು ವಿರಾಟ್ ಕೊಹ್ಲಿ ನಂತರ ಈ ಸಾಧನೆ ಮಾಡಿದ ದೇಶದ ಮೂರನೇ ಯುವ ಆಟಗಾರ ಎನ್ನುವ ಕೀರ್ತಿ ಪಡೆದುಕೊಂಡರು. ಹಿಂದಿನ ವರ್ಷದ ಐಪಿಎಲ್‌ನಲ್ಲಿ 13 ಎಸೆತಗಳಲ್ಲಿ ಅರ್ಧಶತಕ ಗಳಿಸಿದ ಸಾಧನೆ ಅವರದು.

ಮಧ್ಯಮ ಕ್ರಮಾಂಕದಲ್ಲಿ ಸೂರ್ಯಕುಮಾರ್ ಯಾದವ್, ಸಂಜು ಸ್ಯಾಮ್ಸನ್, ರಿಷಬ್ ಪಂಥ್ ತಂಡದ ಬ್ಯಾಟಿಂಗ್ ಶಕ್ತಿಯನ್ನು ಗಟ್ಟಿಗೊಳಿಸಬಲ್ಲರು. 33 ವರ್ಷದ ಸೂರ್ಯಕುಮಾರ್ ಒಂದು ಟೆಸ್ಟ್, 37 ಏಕದಿನ ಮತ್ತು 60 ಟಿ–20 ಅಂತರರಾಷ್ಟ್ರೀಯ ಪಂದ್ಯಗಳನ್ನಾಡಿದ್ದಾರೆ. 29 ವರ್ಷದ ಕೇರಳದ ವಿಕೆಟ್ ಕೀಪರ್ ಸಂಜು ಸ್ಯಾಮ್ಸನ್ ಬ್ಯಾಟಿಂಗ್‌ನಲ್ಲಿ ಶಕ್ತಿ ತುಂಬಬಲ್ಲರು. ದೇಶಿ ಕ್ರಿಕೆಟ್‌ನಿಂದಲೂ ಹೆಸರು ಮಾಡಿರುವ ಬಲಗೈ ಆಟಗಾರ ಸಂಜು 2014ರಲ್ಲಿ ನಡೆದ 19 ವರ್ಷದ ಒಳಗಿನವರ ವಿಶ್ವಕಪ್‌ನಲ್ಲಿ ತಂಡದ ಉಪನಾಯಕರಾಗಿದ್ದರು. 2015ರಲ್ಲಿ ಅಂತರರಾಷ್ಟ್ರೀಯ ಟಿ–20 ಆಡುವ ಮೂಲಕ ದೇಶದ ತಂಡಕ್ಕೆ ಪದಾರ್ಪಣೆ ಮಾಡಿದ್ದರು. ಇದುವರೆಗೂ 16 ಏಕದಿನ, 24 ಟಿ–20 ಪಂದ್ಯಗಳನ್ನಾಡಿದ್ದಾರೆ. ಡೆತ್ (ಕೊನೆಯ) ಓವರ್‌ಗಳು ದುಬಾರಿಯಾಗುತ್ತಿರುವುದರ ಬಗ್ಗೆ ತಂಡ ಎಚ್ಚರಿಕೆ ವಹಿಸಬೇಕಿದೆ.

ತಂಡಕ್ಕೆ ವಿಕೆಟ್ ಕೀಪರ್ ಸ್ಥಾನಕ್ಕೆ ಸಂಜು ಮತ್ತು ರಿಷಬ್ ಪಂಥ್ ನಡುವೆ ಸ್ಪರ್ಧೆಯಿದೆ. ಮಾಜಿ ಕ್ರಿಕೆಟಿಗರು ಯಾರನ್ನು ಆಡಿಸಿದರೆ ಸೂಕ್ತ ಎನ್ನುವ ಸಲಹೆ ನೀಡುತ್ತಿದ್ದಾರೆ. ಮಾಜಿ ಕ್ರಿಕೆಟಿಗ ಆಫ್‌ಸ್ಪಿನ್ನರ್ ಹರಭಜನ್ ಸಿಂಗ್ 'ವಿಕೆಟ್ ಕೀಪರ್ ಆಗಿ ಸಂಜು ಸ್ಯಾಮ್ಸನ್ ಆಡುವುದು ಸೂಕ್ತ' ಎಂದಿದ್ದಾರೆ. ಸಂಜು ಅತ್ಯಂತ ಸ್ಥಿರ ಪ್ರದರ್ಶನ ತೋರುತ್ತಿದ್ದಾರೆ. ಮತ್ತೊಬ್ಬ ಪ್ರತಿಭೆ ಆಲ್‌ರೌಂಡರ್ ಶಿವಂ ದುಬೆ 2019ರಿಂದ ಐಪಿಎಲ್ ಆಡುತ್ತಿದ್ದಾರೆ. ಈ ಬಾರಿಯ ಟೂರ್ನಿಯಲ್ಲಿ 14 ಪಂದ್ಯಗಳಿಂದ 396 ರನ್ ಗಳಿಸಿದ್ದಾರೆ. ಈ ಎಲ್ಲಾ ಕಾರಣಗಳಿಂದಾಗಿ ಭಾರತ ಬ್ಯಾಟಿಂಗ್ ವಿಭಾಗದಲ್ಲಿ ಉತ್ತಮ ಲಯದಲ್ಲಿದೆ.

ಲೀಗ್ ಹಂತದಲ್ಲಿ ಭಾರತ ಮೂರು ಪಂದ್ಯಗಳನ್ನು ನ್ಯೂಯಾರ್ಕ್‌ನಲ್ಲಿ ಆಡಲಿದೆ. ಅಲ್ಲಿನ ಪಿಚ್‌ಗಳಲ್ಲಿ ಭಾರತದ ಕೆಲವು ಆಟಗಾರರಷ್ಟೇ ಆಡಿರುವ ಕಾರಣ ಅಲ್ಲಿನ ಪಿಚ್ ಸ್ವರೂಪ, ಹವಾಗುಣ ಎದುರಿಸುವ ಸವಾಲು ಕೂಡ ಇದೆ. ಆದ್ದರಿಂದ ಕೊಹ್ಲಿ ಬ್ಯಾಟಿಂಗ್ ಕ್ರಮಾಂಕದಲ್ಲಿ ಬದಲಾವಣೆ ಪ್ರಯೋಗ ಮಾಡಿದರೂ ಫಲ ನೀಡುವ ಸಾಧ್ಯತೆಯಿದೆ.